ಗಣೇಶ ಮತ್ತು ಆತ್ಮಲಿಂಗ

ಕಥೆ : ಟಿ.ಎಂ.ಎಸ್. ಚಿತ್ರ: ಶಂಕರ್

1 ವೀರಾಧಿವೀರನಾಗಬೇಕೆಂದು ರಾವಣನು ಹಲವು ಬಗೆಯ ತಪಸ್ಸುಗಳನ್ನು ಆಚರಿಸಿದನು. ಅವನ ತಪಸ್ಸಿಗೆ ಮೆಚ್ಚಿದ ಶಿವನು ಅವನ ಮುಂದೆ ಪ್ರತ್ಯಕ್ಷನಾದನು.



2 ತಥಾಸ್ತು. ನನ್ನ ಆತ್ಮಲಿಂಗವನ್ನು ತೆಗೆದುಕೋ. ಆದರೆ ಒಂದು ಮಾತು. ನೆಲದ ಮೇಲೆ ಅದನ್ನು ಎಲ್ಲಾದರೂ ಇಟ್ಟರೆ, ಅದು ಅಲ್ಲೇ ಶಾಶ್ವತವಾಗಿ ಉಳಿಯುವುದು.



3 ರಾವಣನು ಲಂಕೆಯಲ್ಲಿ ಶಿವನ ಆತ್ಮಲಿಂಗವನ್ನು ಸ್ಥಾಪಿಸಿದರೆ, ಅವನನ್ನು ಯಾರಿಂದಲೂ ಸೋಲಿಸಲಾಗದು ಎಂದು ತಿಳಿದ ದೇವತೆಗಳೆಲ್ಲರೂ ವಿಘ್ನನಿವಾರಕ, ದುಷ್ಟವಿನಾಶಕ ವಿನಾಯಕನ ಬಳಿಗೆ ಹೋದರು. ಎಲ್ಲ ವಿಷಯವನ್ನೂ ತಿಳಿಸಿ ಅವನನ್ನು ಪ್ರಾರ್ಥಿಸಿದರು.

4 ರಾವಣನು ಆತ್ಮಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ಲಂಕೆಯತ್ತ ಹೊರಟ. ಅವನು ಸಂಧ್ಯಾವಂದನೆ ಮಾಡಬೇಕಾದ ಸಮಯವಾಯಿತು. ಆತ್ಮಲಿಂಗವನ್ನು ನೆಲದ ಮೇಲೆ ಇಡಬಾರದಲ್ಲ! ಸ್ವಲ್ಪ ಹೊತ್ತು ಅದನ್ನು ಕೈಯಲ್ಲಿ ಹಿಡಿದು ಕೊಂಡಿರಲು ಯಾರಾದರೂ ಸಿಗುತ್ತಾರೋ ಎಂದು ಸುತ್ತಮುತ್ತ ನೋಡಿದ. ಆಗ ಅಲ್ಲಿ ಗಣೇಶನು ಒಬ್ಬ ಬಾಲಕನ ರೂಪದಲ್ಲಿ ಕಾಣಿಸಿಕೊಂಡ.

5

ಮಗೂ, ಸ್ವಲ್ಪ ಹೊತ್ತು ಈ ಶಿವಲಿಂಗವನ್ನು ಹಿಡಿದುಕೊಳ್ಳುತ್ತೀಯಾ? ನಾನು ಬೇಗನೆ ಸಂಧ್ಯಾವಂದನೆ ಮಾಡಿ ಬರುತ್ತೇನೆ. ಆದರೆ ಇದನ್ನು ನೆಲದ ಮೇಲೆ ಇಡಬಾರದು, ತಿಳಿಯಿತೆ?



ಅಯ್ಯಾ, ನಾನು ಮೂರು ಬಾರಿ ನಿನ್ನನ್ನು ಕರೆಯುತ್ತೇನೆ. ತಡಮಾಡದೆ ಬೇಗನೆ ಬರಬೇಕು. ಆಮೇಲೆ ನನ್ನನ್ನು ಬಯ್ಯಬೇಡ. ಸರಿ ತಾನೆ?

ರಾವಣ ಸಂಧ್ಯಾವಂದನೆಗೆಂದು ಹೋಗಿ ಬರುವಷ್ಟರಲ್ಲೇ ಆ ಬಾಲಕ ರಾವಣನ್ನು ಮೂರು ಬಾರಿ ಕರೆದ. ರಾವಣನಿಗೆ ಅಷ್ಟರೊಳಗೆ ಬರಲಾಗಲಿಲ್ಲ. ಗಣೇಶನು ಆತ್ಮಲಿಂಗವನ್ನು ನೆಲದ ಮೇಲೆ ಇಟ್ಟೇಬಿಟ್ಟ. ರಾವಣ ಬಂದ ಮೇಲೆ ಅದನ್ನು ಮೇಲಕ್ಕೆತ್ತಲು ತನ್ನ ಶಕ್ತಿಯೆಲ್ಲವನ್ನೂ ಹಾಕಿ ಪ್ರಯತ್ನಿಸಿದ. ಆದರೆ ಅದು ಸಾಧ್ಯವಾಗಲಿಲ್ಲ.

6

ಓ ಬಾಲಕ, ನೀನೇನು ಮಾಡಿಬಿಟ್ಟೆ?

ನಾನೇನು ಮಾಡಲಿ? ಮೊದಲೇ ತಿಳಿಸಿದ್ದಂತೆ ಮೂರು ಬಾರಿ ಕರೆದೆ. ಆದರೆ ನೀನು ಬರಲಿಲ್ಲ. ನಿನ್ನಂಥ ಶಕ್ತಿಶಾಲಿಗೂ ಇದನ್ನು ಕದಲಿಸಲಾಗುತ್ತಿಲ್ಲ. ಅದಕ್ಕೆ ಬದಲಾಗಿ, ಇಲ್ಲೇ ಅದು ಮಹಾಬಲೇಶ್ವರನೆಂಬ ಹೆಸರಿನಿಂದ ಪ್ರಸಿದ್ಧವಾಗುವುದು.

ರಾವಣನು ತನ್ನ ಶಕ್ತಿಯೆಲ್ಲವನ್ನು ಹಾಕಿ ಎಳೆದದ್ದರಿಂದ ಆ ಲಿಂಗದ ಆಕಾರ ಗೋವಿನ ಕಿವಿಯಂತೆ ಮಾರ್ಪಟ್ಟಿತು. ಆದ್ದರಿಂದ ಶಿವನ ಆತ್ಮಲಿಂಗವು ನೆಲೆಗೊಂಡ ಆ ಪ್ರದೇಶವನ್ನೇ 'ಗೋಕರ್ಣ' ಎಂದು ಕರೆಯಲಾಯಿತು. (ಈ ಪ್ರದೇಶ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿದೆ.)

7

ಗಣೇಶನಿಗೆ ಸಂಬಂಧಪಟ್ಟ ಇಂಥದೇ ಇನ್ನೊಂದು ಕಥೆಯಿದೆ. ರಾಮನು ತನ್ನ ವನವಾಸವನ್ನು ಮುಗಿಸಿ ಹಿಂದಿರುಗಿ ಬಂದ. ಬಳಿಕ ಅವನ ಪಟ್ಟಾಭಿಷೇಕ ನಡೆಯಿತು. ತನ್ನೊಂದಿಗೆ ಬಂದ ಅತಿಥಿಗಳೆಲ್ಲರಿಗೂ ಕಾಣಿಕೆಗಳನ್ನು ನೀಡಿದ ರಾಮ ಅವರನ್ನೆಲ್ಲ ಕಳುಹಿಸಿಕೊಟ್ಟ. ಕೊನೆಗೆ ವಿಭೀಷಣನನ್ನು ಕರೆದ.

ವಿಭೀಷಣ, ನೀನು ನನಗೆ ಎಷ್ಟೊಂದು ಸಹಾಯ ಮಾಡಿದೆ! ನೀನೇನು ಕೇಳಿದರೂ ನಾನು ಕೊಟ್ಟುಬಿಡುತ್ತೇನೆ. ಏನು ಬೇಕೋ ಕೇಳು.

ಪ್ರಭೂ, ನಿಮ್ಮ ಪೂರ್ವಿಕರಾದ ಇಕ್ಷ್ವಾಕು ವಂಶದ ದೊರೆಗಳು ದೇವಲೋಕದಿಂದ ತಂದ ನಿಮ್ಮ ಕುಲದೇವತೆ ಶ್ರೀರಂಗನಾಥನ ಮೂರ್ತಿಯಿದೆಯಲ್ಲ, ಅದನ್ನು ದಯವಿಟ್ಟು ನನಗೆ ನೀಡು.

8

ಆಗಲಿ, ಅದನ್ನು ನಿನಗೆ ದೇವಾಲಯದ ಶಿಖರದೊಂದಿಗೆ ನೀಡುತ್ತೇನೆ. ಈ ಶಿಖರ ಓಂಕಾರದ ಜೀವಂತರೂಪವಾಗಿದೆ. ಆದರೆ ಅದನ್ನು ಲಂಕೆಗೆ ಕೊಂಡೊಯ್ಯುವಾಗ ಎಲ್ಲೂ ನೆಲದ ಮೇಲೆ ಇಡಬಾರದು.

ಭಗವಾನ್, ನಾನು ಧನ್ಯನಾದೆ. ನೀವು ಹೇಳಿದಂತೆಯೇ ಮಾಡುತ್ತೇನೆ.

ವಿಭೀಷಣನು ಶ್ರೀರಂಗನಾಥನ ಮೂರ್ತಿಯೊಂದಿಗೆ ಶ್ರೀರಂಗಕ್ಕೆ ಬಂದನು. ಅಲ್ಲಿ ಗಣೇಶನ ಪ್ರೇರಣೆಯಂತೆ, ಕಾವೇರೀನದಿಯಲ್ಲಿ ಸ್ನಾನ ಮಾಡಬೇಕೆಂಬ ಬಯಕೆ ಅವನ ಮನಸ್ಸಿನಲ್ಲಿ ಮೂಡಿತು. ಕೈಯಲ್ಲಿದ್ದ ಮೂರ್ತಿಯನ್ನು ಏನು ಮಾಡಲಿ ಎಂದು ಅವನು ಯೋಚಿಸುತ್ತಿರುವಷ್ಟರಲ್ಲಿ ಅಲ್ಲೊಬ್ಬ ಬ್ರಹ್ಮಚಾರಿ ಕಾಣಿಸಿಕೊಂಡ.

9

ಮಗು, ನೀನು ಸರಿಯಾದ ಸಮಯಕ್ಕೆ ಬಂದೆ. ಈ ದೇವಾಲಯ ಶಿಖರವನ್ನು ಸ್ವಲ್ಪ ಕಾಲ ಹೊತ್ತುಕೋ. ನಾನು ಸ್ನಾನ ಮಾಡಿ, ಅರ್ಘ್ಯ ನೀಡಿ ಬರುತ್ತೇನೆ.



ರಾಜ, ನಾನಿನ್ನು ಚಿಕ್ಕವನು. ಇಷ್ಟೊಂದು ಭಾರದ ವಸ್ತುವನ್ನು ಹೆಚ್ಚು ಹೊತ್ತು ಹೊತ್ತಿರಲು ನನ್ನಿಂದಾಗದು. ನಾನು ಮೂರು ಸಲ ಕರೆಯುತ್ತೇನೆ. ಅಷ್ಟರೊಳಗಾಗಿ ನೀನು ಎಲ್ಲ ಮುಗಿಸಿ ಬರಬೇಕು. ಇಲ್ಲದಿದ್ದರೆ ಅದನ್ನು ನೆಲದ ಮೇಲಿಟ್ಟು ಬಿಡುತ್ತೇನೆ.

10 ವಿಭೀಷಣನು ಕಾವೇರೀ ನದಿಯಲ್ಲಿ ತುಂಬ ಹೊತ್ತು ಸ್ನಾನ ಮಾಡುತ್ತ ಕಾಲಕಳೆದ. ಆಗ ...

ರಾಜ, ಈ ಶಿಖರ ತುಂಬ ಭಾರವಾಗಿದೆ. ರಾಜ, ರಾಜ ...



ವಿಭೀಷಣನಿಗೆ ಬ್ರಹ್ಮಚಾರಿಯ ಕೂಗು ಕೇಳಿಸಲಿಲ್ಲ. ಶಿಖರವನ್ನು ಆತ ಕಾವೇರಿ ಇಬ್ಭಾಗವಾಗಿ ಹರಿಯುತ್ತಿದ್ದ ಸ್ಥಳದಲ್ಲಲೇ ಇಟ್ಟುಬಿಟ್ಟ.

11 ಸ್ನಾನ ಮಾಡಿ ಹಿಂದಿರುಗಿದ ವಿಭೀಷಣ ...

ಅಯ್ಯೋ ಅದನ್ನು ನೆಲದ ಮೇಲೆ ಇಡಬೇಡ ಎಂದಿದ್ದೆನಲ್ಲಾ !

ನಾನೇನು ಮಾಡಲಿ, ರಾಜ! ಅದರ ಭಾರವನ್ನು ನನ್ನಿಂದ ತಡೆಯಲಾಗಲಿಲ್ಲ. ನಿನ್ನನ್ನು ಮೂರು ಬಾರಿ ಕರೆದೆ. ಆದರೆ ನೀನು ಬರಲಿಲ್ಲ.

ವಿಭೀಷಣನು ಆ ಶಿಖರವನ್ನು ಕದಲಿಸಲು ಎಷ್ಟು ಪ್ರಯತ್ನಿಸಿದರೂ ಅದು ಅಲುಗಾಡಿಲಿಲ್ಲ. ಅವನು ಬ್ರಹ್ಮಚಾರಿಯ ಬಳಿಗೆ ಹೋಗಿ ಅವನನ್ನು ಹೊಡೆಯಲು ಮುಂದಾದ. ಆ ಹುಡುಗ ಪರ್ವತದ ಬಳಿಗೆ ವೇಗವಾಗಿ ಓಡಿದ. ಕೊನೆಗೂ ಅವನ ಹಿಂದೆ ಓಡಿ ಹೋಗಿ, ಅವನನ್ನು ಹಿಡಿದ ವಿಭೀಷಣ, ಅವನ ತಲೆಗೊಂದು ಏಟು ಹಾಕಿದ.

12 ತುಂಟ ಹುಡುಗ! ನಿನ್ನನ್ನು ಹಿಡಿದುಬಿಟ್ಟೆ.

ಆ ಕೂಡಲೇ ಆ ಬ್ರಹ್ಮಚಾರಿ ಅವನಿಗೆ ತನ್ನ ನಿಜ ಸ್ವರೂಪವನ್ನು ತೋರಿಸಿ, ಗಣೇಶನಾಗಿ ಅವನ ಎದುರು ನಿಂತುಬಿಟ್ಟ. ವಿಭೀಷಣನು ಕೊಟ್ಟ ಏಟಿನಿಂದಾದ ಗುರುತು ತಿರುಚಿಯಲ್ಲಿರುವ 'ಉಚ್ಚಿ ಪಿಳ್ಳೈಯಾರ್ ಕೋವಿ' (ಬಂಡೆಗಳ ಕೋವಿ)ಯಲ್ಲಿ ಇಂದಿಗೂ ಕಾಣಬಹುದು ಎನ್ನುತ್ತಾರೆ.

13

ದೇವಾ, ಇದು ನೀನೆ? ನಾನು ಮಹಾಪಾಪ ಮಾಡಿದೆ. ಶ್ರೀರಾಮಚಂದ್ರ ಕೊಟ್ಟ ಈ ಶ್ರೀರಂಗನಾಥನ ಮೂರ್ತಿಯನ್ನು ನನ್ನ ದೇಶದಲ್ಲಿ ಸ್ಥಾಪನೆ ಮಾಡಲು ನಾನು ಹೊರಟಿದ್ದೆ. ಆದರೆ ನನ್ನ ಬಯಕೆ ಈಡೇರದೆ ಹೋಯಿತು.

ವಿಭೀಷಣ, ದುಃಖಿಸಬೇಡ. ನೀನು ಈ ಮೂರ್ತಿಯನ್ನು ದಕ್ಷಿಣದತ್ತ ಮುಖ ಮಾಡಿರುವಂತೆ ಸ್ಥಾಪನೆ ಮಾಡಿಸುತ್ತೇನೆ. ಅದರಿಂದ ಭಗವಂತನು ಯಾವಾಗಲೂ ಲಂಕೆಯನ್ನು ಹರಸುವಂತಾಗುವುದು.

14

ದೇವಾ, ನಿನ್ನ ದೈವಲೀಲೆಯಾರಿಗೆ ತಿಳಿಯುವುದು? ಶ್ರೀರಂಗನಾಥನು ಇಲ್ಲೇ ಉಳಿಯಬೇಕೆಂಬುದು ದೈವೇಚ್ಛೆಯಾಗಿದ್ದರೆ ನಾನೇನು ತಾನೇ ಮಾಡಬಲ್ಲೆ?

ವಿಭೀಷಣ, ನನ್ನ ತಂದೆ ಪರಮೇಶ್ವರನಿಂದ ರಾವಣನು ಆತ್ಮಲಿಂಗವನ್ನು ಪಡೆದಾಗ, ಅದು ಗೋಕರ್ಣದಲ್ಲಿ ಸ್ಥಾಪನೆಯಾಗುವಂತೆ ನಾನು ಮಾಡಿದೆ. ಈಗ ನಾನು ಶ್ರೀರಾಮನು ಕೊಟ್ಟ ಶ್ರೀರಂಗನಾಥನನ್ನು ಇಲ್ಲಿ ನೆಲೆಗೊಳಿಸಿದೆ.

15

ಶ್ರೀರಂಗನಾಥನು ತನ್ನ ಕೃಪಾದೃಷ್ಟಿಯನ್ನು ನನ್ನ ದೇಶದ ಮೇಲೆ ಬೀರುತ್ತಿದ್ದರೆ ಬೇಕಾದಷ್ಟಾಯಿತು.

ಹಾಗೇ ಆಗಲಿ. ಪ್ರತಿದಿನವೂ ಮಧ್ಯರಾತ್ರಿ ನೀನು ಇಲ್ಲಿಗೆ ಬಂದು ಪೂಜಿಸಿದರೆ, ನಿನ್ನ ಇಷ್ಟಾರ್ಥವೆಲ್ಲವೂ ನೆರವೇರುವುದು.

ಇಂದಿಗೂ ಪ್ರತಿದಿನ ವಿಭೀಷಣನು ಶ್ರೀರಂಗಂ ದೇವಾಲಯಕ್ಕೆ ಬಂದು ಶ್ರೀರಂಗನಾಥನನ್ನು ಪೂಜಿಸುತ್ತಾನೆ ಎಂಬ ನಂಬಿಕೆ ಪ್ರಚಲಿತವಾಗಿದೆ.

''ಭಗವಂತನು ತನ್ನ ಕೃಪೆಯಿಂದಲೇ ತನ್ನ ನಿಜಸ್ವರೂಪವನ್ನು ತೋರಿಸಿಕೊಡುತ್ತಾನೆ. ಅವನು ಜ್ಞಾನ ಸೂರ್ಯನಾಗಿದ್ದಾನೆ. ಅವನ ಅರಿವಿನ ಒಂದೊಂದು ಕಿರಣವೂ ಜಗತ್ತಿನ ಅರಿವನ್ನು ನಮಗೆ ನೀಡುವುದು. ಅವನ ಮೂಲಕವೇ ನಮಗೆ ಎಲ್ಲ ಬಗೆಯ ಜ್ಞಾನ ಬಂದೊದಗುವುದು. ಸಾರ್ಜೆಂಟನು ರಾತ್ರಿ ಹೊತ್ತು ನಡೆದಾಡುವಾಗ ಅವನ ಮುಖ ಕಾಣಿಸದು. ಲಾಟೀನನ್ನು ಮೇಲಕ್ಕೆತ್ತಿ , ಬೆಳಕನ್ನು ತನ್ನ ಮುಖದ ಮೇಲೆ ಬೀರಿದರೆ ಮಾತ್ರ ನಾವು ಅವನನ್ನು ನೋಡ ಬಹುದು. ಅದೇ ರೀತಿ ಭಗವಂತನು ತನ್ನನ್ನು ತಾನೇ ತೋರಿಸಿಕೊಟ್ಟರೆ ಮಾತ್ರ ನಾವು ಅವನನ್ನು ಕಾಣಬಹುದು.''

– ಶ್ರೀರಾಮಕೃಷ್ಣರು